ದಿನಾಂಕ 02.07.2025 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಬಿ ಎಸ್ ಎ ವಕೀಲರಿಂದ

ಈ ದಾವಾದ ನೋಟಿಸು ನನಗೆ 2012 ರಲ್ಲಿ ಬಂದಿರುತ್ತದೆ. ಅಸಲರ್ಜಿಯಲ್ಲಿ ಬರೆದ ಮಾಹಿತಿಯನ್ನು ತಿಳಿದುಕೊಂಡಿರುತ್ತೇನೆ. ಕಾಲಕಾಲಕ್ಕೆ ಈ ದಾವೆ ಬಗ್ಗೆ ಎಲ್ಲಾ ಮಾಹಿತಿ ತಿಳಿದುಕೊಂಡಿರುತ್ತೇನೆ. ಈಗ ನನ್ನ ತಾಯಿ ಪರವಾಗಿ ಮೊಕ್ತಿಯಾರನಾಗಿ ಸಾಕ್ಷಿ ನುಡಿಯುತ್ತಿದ್ದೇನೆ. 2012 ರಲ್ಲಿ ನನ್ನ ತಾಯಿ ವಕೀಲರನ್ನು ನೇಮಿಸಿಕೊಂಡಿದ್ದರು. ಅವರು ಶ್ರೀ ಆರ್ ಎಸ್ ತಳವಾರ ಮತ್ತು ಶ್ರೀ ಬಿ. ಎಚ್. ತಳವಾರ ವಕೀಲರು ಎಂದರೆ ಸರಿ. 2020 ರವರೆಗೆ ಶ್ರೀ ಆರ್ ಎಸ್ ತಳವಾರ ವಕೀಲರು ಕೇಸು ನಡೆಸಿದ್ದರು ಎಂದರೆ ಸರಿ. ಆವಾಗಿನಿಂದ ನನ್ನ ತಾಯಿ ಮತ್ತು ಮಾವ ಎಲ್ಲಾ ಮಾಹಿತಿಯನ್ನು ತಿಳಿದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಇದರಲ್ಲಿ ಮೊದಲಿಗೆ ಪ್ರತಿವಾದಿ ಇದ್ದಾಗ ತಕರಾರು ಸಲ್ಲಿಸಿರುತ್ತಾರೆ. ನನಗೆ ಈ ಕೇಸಿನ ಬಗ್ಗೆ ಎಲ್ಲಾ ಮಾಹಿತಿ ಇದೆ. ದಿಃ 03.10.2018 ರಂದು ವಾದಿ ಫಕ್ಕೀರಪ್ಪನ ಸಾಕ್ಷಿ ಮುಗಿದಿರುತ್ತದೆ ಎಂದರೆ ಸರಿ. ನಂತರ ಪ್ರತಿವಾದಿಯ ಸಾಕ್ಷಿ ಸಹ ಮುಗಿದಿರುತ್ತದೆ ಎಂದರೆ ಸರಿ. ಪ್ರತಿವಾದಿಯ ಸಾಕ್ಷಿ ಮುಗಿದ ನಂತರ ನನ್ನ ತಾಯಿ ಪ್ರತಿವಾದಿಯಿಂದ ವಾದಿ ಅಂತಾ ಪರಿವರ್ತನೆ ಆಗಲು ಅರ್ಜಿ ಸಲ್ಲಿಸಿದ್ದಳು ಎಂದರೆ ಸರಿ.

ನನ್ನ ತಾಯಿ ಪ್ರತ್ಯೇಕವಾಗಿ ವಂಶಾವಳಿ ಸಲ್ಲಿಸಿರುತ್ತಾಳೆ. ನನ್ನ ತಾಯಿ ಪ್ರತ್ಯೇಕವಾಗಿ ವಂಶಾವಳಿ ಸಲ್ಲಿಸಿರುತ್ತಾಳೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಿದ್ದುಪಡಿ ಅಸಲರ್ಜಿಗೂ ಯಾವುದೇ ವಂಶಾವಳಿ ಹಾಕಿರುವುದಿಲ್ಲ ಎಂದರೆ ಸರಿ. ವಾದಿ ಫಕ್ಕೀರಪ್ಪ ಹಾಕಿದ ವಂಶಾವಳಿಯನ್ನು ನನ್ನ ತಾಯಿ ಮುಂದುವರೆಸಿದ್ದಾಳೆ ಎಂದರೆ ಸರಿ. ಪ್ರತಿವಾದಿ ನಂ. 8 ನನ್ನ ಅಜ್ಜನಾಗಬೇಕು. ಪ್ರತಿವಾದಿ ನಂ.8 ಶಂಭಣ್ಣನ ದತ್ತಕ ಮಗ ಇರುತ್ತಾರೆ. ಪ್ರತಿವಾದಿ ನಂ. 8 ರ ಜನಕ ತಂದೆ ಪರಸಪ್ಪ. ಪ್ರತಿವಾದಿ ನಂ. 8 ರ ಜನಕ ತಂದೆ ಹೆಸರು ರಾಮಣ್ಣ ಎಂದರೆ ಇರಬಹುದು. ರಾಮಣ್ಣ ಮತ್ತು ಶಂಭಣ್ಣ ಇವರು ಪರಸಪ್ಪನ ಮಕ್ಕಳು ಎಂದರೆ ಸರಿ. ಪರಸಪ್ಪ ಮತ್ತು ದಾವಾ ವಂಶಾವಳಿಯಲ್ಲಿ ತೋರಿಸಿರುವ ಯಲ್ಲಪ್ಪ ಖಾಸಾ ಅಣ್ಣ ತಮ್ಮಂದಿರು ಎಂದರೆ ಸರಿ. ಪರಸಪ್ಪ ಮತ್ತು ಯಲ್ಲಪ್ಪ ಇವರಿಬ್ಬರು ರಾಮಣ್ಣನ ಮಕ್ಕಳು ಎಂದರೆ ಸರಿ. ಫಕ್ಕೀರಪ್ಪ ತಂದೆ ಯಲ್ಲಪ್ಪ ಇವರು ಕೊಪ್ಪರಸಿಕೊಪ್ಪದಲ್ಲಿಯೇ ತೀರಿಕೊಂಡಿರುತ್ತಾರೆ ಎಂದರೆ ಇರಬಹುದು.

ರಾಮಚಂದ್ರ ಪವಾರ ಸಲ್ಲಿಸಿದ ಫಾರ್ಮ ನಂ. 7 ಅರ್ಜಿಯು ತಿರಸ್ಕೃತಗೊಂಡ ಮೇಲೆ ಮೂಲ ಮಾಲೀಕ ಫಕ್ಕೀರಪ್ಪ ಆ ಜಮೀನನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರ ಬಗ್ಗೆ 2012 ರಲ್ಲಿ ನೋಟಿಸು ಬಂದ ಮೇಲೆ ಗೊತ್ತಾಗಿರುತ್ತದೆ. ಸದರಿ ಖರೀದಿಪತ್ರವನ್ನು ಅವಧಿಯೊಳಗೆ ಎಲ್ಲಿಯೂ ಪ್ರಶ್ನಿಸಿಲ್ಲ. ಜಮೀನು ಮಾರಾಟ ಮಾಡುವ

7 ವರ್ಷ ಪೂರ್ವದಲ್ಲಿಯೇ ನನ್ನ ಅಜ್ಜಿ ಪೀರವ್ವ ಮನೆಯನ್ನು ಸಹ 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಖರೀದಿಪತ್ರಕ್ಕೆ ನಾರಾಯಣಪ್ಪ ಸಮ್ಮತಿ ಸಾಕ್ಷಿ ಅಂತಾ ಸಹಿ ಮಾಡಿರುತ್ತಾರೆ ಎಂದರೆ ಆ ವಿಷಯ ನನ್ನ ತಾಯಿಗೆ ಗೊತ್ತಿರುವುದಿಲ್ಲ.

ಕೊಪ್ಪರಸಿಕೊಪ್ಪ ಗ್ರಾಮದಲ್ಲಿ ಹನಮಂತಪ್ಪ ಜಾಧವ ಇವರು ಹಿರಿಯವ್ಯಕ್ತಿ ಎಂದರೆ ಸರಿ. ಹನಮಂತಪ್ಪ ಜಾಧವ ಇವರು ಸಹ ಸಮ್ಮತಿ ಪತ್ರಕ್ಕೆ ಸಾಕ್ಷಿ ಅಂತಾ ಸಹಿ ಮಾಡಿರುತ್ತಾರೆ ಎಂದರೆ ಸರಿ. ಪೀರವ್ವ ಮತ್ತು ನಾರಾಯಣಪ್ಪ ಈ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿದ ಆಸ್ತಿಗಳ ಹಣದಿಂದ ಎಲ್ಲಾ ಮಕ್ಕಳನ್ನು ನೋಡಿಕೊಂಡು ಸಲುಹಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನುಗಳನ್ನು 40-50 ವರ್ಷಗಳ ಹಿಂದೆ ಮಾರಾಟ ಮಾಡಿದ್ದರೂ ಸಹ ಈಗ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

: ಮರುವಿಚಾರಣೆ ಇಲ್ಲ :

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್